ಕಂತುಗಳನ್ನು ಚಿತ್ರೀಕರಿಸುವ ನಿರ್ಧಾರವಾಗಿತ್ತು. ಮಳೆಗಾಲದ ದೃಶ್ಯಗಳ ಎರಡು ತಿಂಗಳ ಸ್ಕ್ರಿಪ್ಟ್ ತಯಾರಾಗಿತ್ತು. ಇನ್ನು ಆರು ತಿಂಗಳೊಳಗೆ ಬೇರೆ ಕಡೆ ಹೋಗುವ ಯಾವ ಸೂಚನೆಯು ಇರಲಿಲ್ಲ. ಇದ್ದಕ್ಕಿದ್ದಂತೆ ಇಂತಹ ಮಳೆಗಾಲದಲ್ಲಿ ಜಾಗ ಬದಲಿಸುವ ನಿರ್ಧಾರ ಎಲ್ಲರಿಗೂ ಅಚ್ಚರಿಯುಂಟುಮಾಡಿತು. ಉಳಿದವರಿಗಿಂತ ಇದು ಆನಂದ ಮತ್ತು ಚಂದನಿಕಾರಿಗೆ ತೀವ್ರ ಆತಂಕವನ್ನು ತಂದೊಡ್ಡಿತು. ಲೊಕೇಶನ್ ಬದಲಾದರೆ ಚಂದನಿಕಾ ಇಲ್ಲಿಂದ ಹೊರಟುಹೋಗಲೇ ಬೇಕಿತ್ತು.

ಶ್ರೀರಂಗಪಟ್ಟಣದಷ್ಟು ದೂರ ಆನಂದನಿಗೆ ಪದೇ ಪದೇ ಹೋಗಿ ಭೆಟ್ಟಿಯಾಗಲಾಗುವುದಿಲ್ಲ. ಚಂದನಿಕಾಳೊಂದಿಗೆ ಸಮಾಲೋಚಿಸಿ ಆನಂದ ಒಂದು ನಿರ್ಧಾರಕ್ಕೆ ಬಂದ. ರಾತ್ರಿ ಅಜ್ಜಿಗೆ ಸಮಸ್ಯೆಯನ್ನು ವಿವರಿಸಿದ. ಪಾಂಡುರಂಗ ಉಂಟು ಮಾಡಿದ ಆವಾಂತರದಲ್ಲಿ ಆ ವಿಷಯ ಎತ್ತುಗಡೆ ಮಾಡಲು ಬಕುಲಾರಿಗಾಗಿರಲೇ ಇಲ್ಲ. ರಾತ್ರಿ ದೇಶ್ಪಾಂಡರಿಗೆ ಈ ವಿಷಯವನ್ನು ಸಾದ್ಯಂತವಾಗಿ ವಿವರಿಸಿಹೇಳಿದರು. ಇದನ್ನು ನಿರೀಕ್ಷಿಸಿರಲಿಲ್ಲವಾದ್ದಕ್ಕೆ ಅವರಿಗೆ ಸಣ್ಣ ಕಸಿವಿಸಿಯಾಯಿತು. ಯೋಚನೆಗೆ ಬಿದ್ದರು. ಆದರೆ ಲೋಕಜ್ಞಾನವುಳ್ಳ ಅವರು ಈ ಕಾಲದಲ್ಲಿ ಅದು ನಡೆಯಬಾರದು ಅನ್ನುವ ಮನೋಭಾವದವರಲ್ಲ. ತಾಯಿ ಮಗಳು ಇಲ್ಲಿದ್ದದ್ದು ದೀರ್ಘಕಾಲ ಅನ್ನಬಹುದಾದದ್ದೆ. ಇಬ್ಬರ ನಡತೆಯಲ್ಲೂ ಯಾವ ಲೋಪವು ಕಂಡಿಲ್ಲ. ಚಂದನಿಕಾ ಒಳ್ಳೆಯ ಹುಡುಗಿ. ನೋಡಲು ಚಂದವಿದ್ದಾಳೆ. ಕಲಿತೂ ಇದ್ದಾಳೆ. ಆನಂದನಿಗೆ ಮನಸ್ಸಿದ್ದರೆ ಬೇಡವೆನ್ನಲು ಕಾರಣವಿಲ್ಲ. ಆದರೆ ಈಗ ಬಂದ ಸಮಸ್ಯೆಗೆ ತಾವೇನು ಮಾಡಬಹುದು ಅನ್ನುವುದು ಹೊಳೆಯಲಿಲ್ಲ. ಆನಂದನನ್ನೆ ಕರೆದರು. ಅವಳಿಗಿದ್ದ ಅಭಿಪ್ರಾಯವನ್ನು ವಿವರಿಸಿದ ಆನಂದ. ಎಲ್ಲರೂ ಈ ಸಂಬಂಧಕ್ಕೊಪ್ಪುವ ಭರವಸೆಯಿದ್ದರೆ ಅವಳು ಈ ಧಾರಾವಾಹಿಯಿಂದ ಹೊರಬರುತ್ತಾಳೆ ಅಂತ ಅವಳ ನಿರ್ಧಾರವನ್ನು ತಿಳಿಸಿದ. ಜೊತೆಗೆ ಯಾವುದಾದರು ಹತ್ತಿರದ ಶಾಲೆಯಲ್ಲಿ ಸಾಧ್ಯವಾದರೆ ಅವಳಿಗೆ ತಾತ್ಕಾಲಿಕ ಕೆಲಸ ಕೊಡಿಸಬೇಕೆಂಬ ಕೋರಿಕೆಯನ್ನು ಎದುರಿಟ್ಟ. ದೇಶ್ಪಾಂಡರು ಯೋಚನೆಗೆ ಬಿದ್ದರು. ಅವರೇ ಆಡಳಿತ ಮಂಡಳಿಯಲ್ಲಿರುವ ಎರಡು ಶಾಲೆಗಳಿದ್ದವು. ತಾತ್ಕಾಲಿಕ ಶಿಕ್ಷಕರ ಬೇಡಿಕೆಯೂ ಇತ್ತು. ಒಂದು ತಿಂಗಳ ನಂತರ ಕಮಿಟಿ ಮೀಟಿಂಗಿತ್ತು. ತನಗೆ ಬೇಕಾಗಿ ಮೊದಲೇ ಮೀಟಿಂಗ್ ಏರ್ಪಡಿಸುವುದಕ್ಕೆ ಅವರ ಮನವೊಪ್ಪಲಿಲ್ಲ. ಆನಂದನಿಗೆ ಅದನ್ನೆ ಹೇಳಿದರು. ಚಂದನಿಕಾ ಒಂದು ತಿಂಗಳು ಕಾಯಲಿ. ಅಲ್ಲಿಯವರೆಗೆ ಕಲಿಸೋ ಪೂರ್ವತಯಾರಿ ಮಾಡಿಕೊಳ್ಳಲಿ ಅನ್ನುವ ಅಭಿಪ್ರಾಯ ಕೊಟ್ಟರು. ಈಗಿರುವ ಮನೆಯಂತು ಅವರಿಗೆ ಸಮಸ್ಯೆಯಿರಲಿಲ್ಲ.

ಕಮಲಮ್ಮನಿಗೆ ಆತಂಕವಿತ್ತು. ದೊಡ್ಡ ಮನೆತನದವರು. ಇವಳೇನೋ ಸಂಬಂಧ ಜೋಡಿಸಿಕೋಬಿಟ್ಟು. ಈಗಿರುವ ಆದಾಯ ಮೂಲವನ್ನು ಹಿಂದೆ ಮುಂದೆ ನೋಡದೆ ಕಳೆದುಕೊಂಡರೆ, ಮುಂದೆ ಅಚಾತುರ್ಯವಾದರೆ ಎಂಬ ಭಯ! ಆನಂದ ಅವಳ ಹತ್ತಿರ ಮನೆಯ ಹಿರಿಯರು ಒಪ್ಪಿರುವ ಸಂಗತಿ, ತಾತ್ಕಾಲಿಕವಾಗಿ ಆಗಲಿರುವ ಉದ್ಯೋಗದ ವ್ಯವಸ್ಥೆ ಎಲ್ಲ ಹೇಳಿ ಸಂದೇಹ ದೂರ ಮಾಡಿದ. ಅವರಿಗೆ ಒಂದು ವೇಳೆ ಆದಾಯವಿಲ್ಲದಂತಾದರೂ ಭಯವೇನಿಲ್ಲ. ಈಗ ಇಬ್ಬರೂ ತನ್ನ ಮನೆಯವರು ಅಂತ ಧೈರ್ಯ ಕೊಟ್ಟ.

ಇಲ್ಲಿ ಯುನಿಟ್ಟಿರುವುದು ಇನ್ನು ಹದಿನೈದೆ ದಿನ ಅನ್ನುವುದು ನಿಕ್ಕಿಯಾಗಿತ್ತು. ಚಂದನಿಕಾ ಇನ್ನೂ ತಾನು ಧಾರಾವಾಹಿಯಿಂದ ಹೊರಹೋಗುವ ನಿರ್ಧಾರ ತಿಳಿಸಿರಲಿಲ್ಲ. ತೆಗೆದುಕೊಳ್ಳುವಾಗ ಅವಳಿಗೆ ಅಷ್ಟು ಮಹತ್ವ ಕೊಟ್ಟಿರದ ನಾಯ್ಡು ಹೆಸರಿಗೆ ಒಂದು ಒಪ್ಪಂದ ಮಾಡಿದ್ದ. ಅದರ ಪ್ರಕಾರ, ಒಂದು ತಿಂಗಳು ಮೊದಲು ತಿಳಿಸಬೇಕಿತ್ತು. ಆನಂದ ಗದ್ದೆಗೆ ಹೊರಟಿದ್ದ. ಅವನನ್ನು ಸನ್ನೆಮಾಡಿ ಕರೆದಳು. ಅವಳ ಮನಸ್ಸೇಕೊ ಡೋಲಾಯಮಾನವಾಗುತ್ತಿತ್ತು. ಇದು ಆನಂದನ ವಿಷಯದಲ್ಲಿ ಅಪನಂಬಿಕೆಯಂತೂ ಸುತರಾಂ ಅಲ್ಲ. ಆದರೆ ಗೊತ್ತಾಗದ ಯಾವುದೊ ಆತಂಕ ಆಳದಲ್ಲೆಲ್ಲೊ ಕಾಡುತ್ತಿರುವ ಹಾಗೆ. ಅವನ ಹತ್ತಿರ ಒಪ್ಪಂದದ ವಿಷಯ ಹೇಳಿದಳು. ಅವನು ಇನ್ನೇನು ಯೋಚಿಸೋದು... ತಿಳಿಸಿಬಿಡು ಅಂದ ದೃಢವಾಗಿ. 'ನಿಂಗೆ ನಟಿಸುವ ಆಕರ್ಷಣೆಯೇನಾದರೂ ಅಂತಹ ತಳಮಳ ಹುಟ್ಟಿಸುತ್ತಿದೆಯ ನಿನ್ನನ್ನೆ ಕೇಳಿಕೋ. ಹಾಗಿದ್ದರೆ ನಟನೆಯಲ್ಲಿ ಮುಂದುವರಿ. ಅದಕ್ಕೆ ನನ್ನೆಲ್ಲ ಸಹಕಾರವು ಇರತದೆ, ಸಂದೇಹ ಬೇಡ. ನಮ್ಮ ಸಂಬಂಧ ಪ್ರಾಮಾಣಿಕವಾದುದಾದರೆ, ಅದನ್ನು ಕಡಿಯಲು ಯಾವುದರಿಂದಲೂ ಸಾಧ್ಯವಿಲ್ಲ' ಅಂದ. ಆ ಸೆಳೆತವಲ್ಲ ಎಂಬುದವಳಿಗೆ ಗೊತ್ತಿತ್ತು. ಅವನಷ್ಟು ಹೇಳಿದ ಮೇಲೆ ನಾಯ್ಡುಗೆ ಎಸ್ಸೆಮ್ಮೆಸ್ ಕಳಿಸಿ, ಫೋನಲ್ಲೂ ಹೇಳಿದಳು. ನಾಯ್ಡು ಇದನ್ನು ಊಹಿಸಿರಲಿಲ್ಲ. ಟಿಆರ್‌ಪಿ ಏರುವುದರಲ್ಲಿ ಅವಳ ಪಾಲು ಅವನಿಗೆ ಅರಿವಿತ್ತು. 'ನಿಂಗೆ ತುಂಬಾ ದೊಡ್ಡ ಭವಿಷ್ಯವಿದೆ ಚಂದನಿಕಾ, ಇದೆಂತಹ ನಿರ್ಧಾರ? ಸದ್ಯದಲ್ಲೆ ನಿನ್ನ ಸಂಭಾವನೆಯನ್ನ ಏರಿಸಬೇಕಂತ ಮಾತಾಡಿಕೊಂತಿದೀವಿ. ಶ್ರೀರಂಗಪಟ್ಟಣ ಅಂದ್ರೆ ಅದೇನು ಏಳು ಸಮುದ್ರದಾಚೆಗಿಲ್ಲ. 'ಯೋಚಿಸು' ಅಂತ ಒತ್ತಾಯಿಸಿದ. ಅವಳು ತನ್ನ ವೈಯಕ್ತಿಕ ಕಾರಣಕ್ಕೆ ಬಿಡಬೇಕಾಗಿದೆ ಅಂತ ಹೇಳಿದಳು. ಒಪ್ಪಿದವ ಮತ್ತೆ ಒಂದು ತಾಸಿನ ನಂತರ ಫೋನು ಮಾಡಿದ. ಒಂದು ತಿಂಗಳು ಬೇಕಿದ್ರೆ ರಜೆ ತೆಗೆದುಕೊಳ್ಳಲಿ. ಅವಳ ಪಾತ್ರ ಕಾಣಿಸಿಕೊಳ್ಳದ ರೀತಿ ಕಥೆಯ ಚಿತ್ರೀಕರಣ ಮಾಡತೀವಿ, ಆಮೇಲೆ ಬಂದು ಮತ್ತೆ ಮುಂದುವರಿಸಬಹುದು ಅನ್ನುವ ಆಯ್ಕೆಯನ್ನು ಎದುರಿಟ್ಟ. ಈ ಅಪರೂಪದ ಔದಾರ್ಯ ಅವಳನ್ನು ಧರ್ಮ ಸಂಕಟದಲ್ಲಿ ಸಿಲುಕಿಸಿತು. ಇಂತದನ್ನು ಬಿಟ್ಟು ತಾನು ತಪ್ಪು ಮಾಡುತ್ತಿದ್ದೇನೆಯೆ ಅನ್ನುವ ಅಪರಾಧಿ ಪ್ರಜ್ಞೆ ಕಾಡಿತು. ಆನಂದ ಅದನ್ನು ಕೇಳಿ, ಆಲೋಚಿಸಿದವ 'ಈ ಒಂದು ತಿಂಗಳ ನಿಬಂಧನೆ ಮುಗಿಸು, ನಂತರ ಒಂದು ತಿಂಗಳ ರಜೆಯನ್ನು ತೆಗೆದುಕೊ. ಬಿಡುವಿನಲ್ಲಿ ನಿನ್ನ ಮನಸೇನು ಹೇಳತದೊ ಅರಿವಾಗತದೆ. ನಂತರ ನಿರ್ಧರಿಸೋಣ. ಅವರ ಹತ್ತಿರ ನಮ್ಮ ವಿಷಯ ಹೇಳಬಹುದು, ಬೇಡ ಅನಿಸಿದರೆ ಹೇಳಬೇಡ. ಏನೂ ವ್ಯತ್ಯಾಸವಾಗೋದಿಲ್ಲ' ಅಂದ. ಅವನ ಆತ್ಮವಿಶ್ವಾಸದ ಮಾತು ಅವಳ ಮನಸ್ಸಿಗೆ ಧೈರ್ಯ ಕೊಟ್ಟಿತು.

ಹದಿನೈದು ದಿನ ಇಲ್ಲಿ ಚಿತ್ರೀಕರಣ ಮುಗಿಸಿದ ಯುನಿಟ್ ದೇಶ್ಪಾಂಡರಿಗೆ ಕೊಡಬೇಕಾದ ಬಾಡಿಗೆ ಸಲ್ಲಿಸಿ, ಕೃತಜ್ಞತೆ ಹೇಳಿತು. ಎಲ್ಲವನ್ನು ಪ್ಯಾಕ್ ಮಾಡಿಸಿ ಟ್ರಕ್ಕಿಗೆ ತುಂಬಿ ವಿದಾಯ ಹೇಳಿತು. ಉಳಿದ ಹದಿನೈದು ದಿನ ಚಂದನಿಕಾ ಶ್ರೀರಂಗಪಟ್ಟಣದಲ್ಲೆ ಇರಬೇಕಿತ್ತು. ಹೊರಡುವ ಹಿಂದಿನ ರಾತ್ರಿ, ಯಾವುದು ತನ್ನ ನಿರ್ಧಾರವಿರಬೇಕೆಂಬುದು ಅವಳಿಗೆ ಸ್ಪಷ್ಟವಾಯಿತು. ಹಾಸಿಗೆಯಲ್ಲಿ ಮಲಗಿದವಳಿಗೆ ನಿದ್ದೆ ಹತ್ತಲಿಲ್ಲ. ಆನಂದನಿಂದ ತಾನು ದೂರವಿರಬೇಕಾಗಿರುವ ಅರಿವಿಂದ ಕಣ್ಣೀರು ತಡೆಯಲಾಗಲಿಲ್ಲ. ಅದನ್ನು ನೋಡಿದ ಕಮಲಮ್ಮನಿಗೂ ಗಂಟಲು ಕಟ್ಟಿ, ಮಗಳ ಹಣೆಯ ಮೇಲೆ ಕೈಯಿಟ್ಟು 'ಹದಿನೈದೇ ದಿನ' ಅಂದಳು.

ಯುನಿಟ್ಟಿನ ವಾಹನವೇರಿ ಹೋದವಳು, ಹದಿನೈದು ದಿನ ಲೆಕ್ಕವಿಡುತ್ತಾ ಕಳೆದು, ತಾಯಿಯೊಂದಿಗೆ ವಾಪಸಾಗಿ ಮತ್ತೆ ಆನಂದನ ಅದೇ ಮನೆ ಸೇರಿದಾಗ, ಮರಳಿ ಗೂಡು ಸೇರಿದ ಹಕ್ಕಿಯ ನೆಮ್ಮದಿಯನ್ನನುಭವಿಸಿದಳು.

***

ಈಗ, ರಜೆಯಲ್ಲಿದ್ದವಳಿಗೆ ಕೆಲಸವಿರಲಿಲ್ಲ. ಈ ಹದಿನೈದು ದಿನದ ಅವಧಿಯಲ್ಲಿ ಅವಳಿಗೆ ತನಗೇನು ಬೇಕು ಎಂಬುದರರಿವಾಗಿತ್ತು. ಆಯ್ಕೆ ಸುಲಭವಾಗಿತ್ತು. ಹಗಲು ಹೊತ್ತು ಆನಂದನಿರುತ್ತಿದ್ದ. ಅವನೊಡನೆ ಮಾತಾಡಲು ಈಗ ಮೊದಲಿನಂತೆ ಹೆದರಬೇಕಾಗಿರಲಿಲ್ಲ. ಎಲ್ಲರಿಗೂ ಗೊತ್ತಿದ್ದ ಸಂಗತಿಯಾದ್ದಕ್ಕೆ ಏನಂದುಕೊಳ್ಳುತ್ತಾರೊ ಎಂಬ ಆತಂಕಕ್ಕೆ ಕಾರಣವಿರಲಿಲ್ಲ. ಮನೆಯವರೆಲ್ಲ ಪ್ರೀತಿಯಿಂದ ನೋಡುತ್ತಿದ್ದರು. ಆದರೆ ರಾತ್ರಿ ಮಲಗಿದಾಗ ಏನೇನೊ ಆಲೋಚನೆ ಬರುತ್ತಿತ್ತು. ಒಮ್ಮೊಮ್ಮೆ ಒತ್ತಡ ಹೆಚ್ಚುತ್ತಿತ್ತು. ಸರಿ, ಹೀಗೇ ಇದ್ದರೆ ಹಿಂಸೆ ಹೊರತು ಇದಕ್ಕೆ ಪರಿಹಾರ ಸಾಧ್ಯವಿಲ್ಲ, ಏನಾದರಾಗಲಿ, ಈ ಆಲೋಚನೆಗಳಿಂದ ಒಮ್ಮೆ ಮುಕ್ತಿ ಪಡೆಯಲೇಬೇಕು ಅನಿಸಿಬಿಟ್ಟಿತು ಅವಳಿಗೆ. ಬೆಳಗ್ಗೆ, ಆನಂದನ ಹತ್ತಿರ ತನ್ನಾಸೆ ಹೇಳಿಕೊಂಡಳು. ಮಳೆಗಾಲವಾದ್ದಕ್ಕೆ ಹೊರಗೆಲ್ಲ ನೆಲ ಒದ್ದೆಯಾಗಿರುತ್ತದೆ. ಕುಳಿತು ಮಾತಾಡಲಾಗುವುದಿಲ್ಲ. ಮನೆಯಲ್ಲಿ ಏಕಾಂತವಾದ ನಿರ್ಜನ ಜಾಗ ಕಷ್ಟ. ಆನಂದ ತಲೆಕೆರೆದುಕೊಂಡ. ಆಮೇಲೆ ಹೊಳೆಯಿತು. ಆಯಿತು, ನಾಳೆ ಬೆಳಗ್ಗೆ ಹೊರಡುವ ಅಂದ. ಸಾಯಂಕಾಲ, ಅಜ್ಜಿಯೊಂದಿಗೆ 'ಅಜ್ಜಿ, ಚಂದನಿಕಾಗೇನೊ ಮಾರಿಕಾಂಬಾ ದೇವಿಗೆ ಪೂಜೆ ಮಾಡಿಸಬೇಕೊಂತ ಆಸೆ. ಬೆಳಗ್ಗೆ ಹೋಗಿ, ಸಂಜೆ ಬಂದುಬಿಡತೇವೆ ಆಗಬಹುದಾ?' ಕೇಳಿದ. ಅವರಿಗೆ ಸಂತೋಷವಾಯಿತು. 'ಆಗಲಿ, ಅದಕ್ಕೇನಂತೋ? ದೇವಿಯಾಶೀರ್ವಾದ ಬೇಕು. ಹೋಗಿಬನ್ನಿ' ಅಂದರು.

**(ಸಶೇಷ)**